ಕರ್ನಾಟಕ ಸರ್ಕಾರ

ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ

ವಾರ್ತಾ ಸೌಧ, ಸಂಖ್ಯೆ 17, ಭಗವಾನ್ ಮಹಾವೀರ ರಸ್ತೆ, ಬೆಂಗಳೂರು – 560 001.

ಸಂಖ್ಯೆ : ವಾಇ : ಉ ನಿ : ಸುಮಪ : 2016-17 ದಿನಾಂಕ: 25-02-2017

# ಪತ್ರಿಕಾ ಪ್ರಕಟಣೆ

## 30 ಜಿಲ್ಲೆಗಳಲ್ಲಿ "ಶ್ರದ್ಧಾಂಜಲಿ" ಉಚಿತ ಆಂಬುಲೆನ್ಸ್ ಸೇವೆ ಜಾರಿ

ಬೆಂಗಳೂರು, ಫೆಬ್ರವರಿ 25 , (ಕರ್ನಾಟಕ ವಾರ್ತೆ)

ಮರಣ ಸಂಭವಿಸಿದ ಸ್ಥಳಗಳಿಂದ ಪಾರ್ಥಿವ ಶರೀರಗಳನ್ನು ಶವಗಾರಕ್ಕೆ ಉಚಿತವಾಗಿ ಸಾಗಿಸಲು 'ಶ್ರದ್ಧಾಂಜಲಿ' ಆಂಬುಲೆನ್ಸ್ ಸೇವಾ ಕಾರ್ಯಕ್ರಮವನ್ನು ಫೆಬ್ರವರಿ 2017 ರಿಂದ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯು ಎಲ್ಲಾ 30 ಜಿಲ್ಲೆಗಳಲ್ಲಿ ಪ್ರಾರಂಭಿಸಲಿದೆ ಎಂದು ಇಎಂಆರ್ಐ ಉಪನಿರ್ದೇಶಕರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಇದಕ್ಕಾಗಿ ಪ್ರತಿ ಜಿಲ್ಲೆಯಲ್ಲಿ ಒಂದು ಆಂಬ್ಯುಲೆನ್ಸ್‌ನ್ನು ಅಗತ್ಯ ಮಾರ್ಪಾಡು ಮಾಡಿ, ಜಿಲ್ಲಾ ಮಟ್ಟದಲ್ಲಿ ಸೂಕ್ತ ಪ್ರದೇಶದಲ್ಲಿ ನಿಲ್ಲಿಸಲಾಗುತ್ತದೆ. ಇದು ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಅಧಿಕಾರಿಗಳು/ಜಿಲ್ಲಾ ಶಸ್ತ್ರ ಚಿಕಿತ್ಸಕರ ನಿಯಂತ್ರಣದಲ್ಲಿರುತ್ತದೆ ಎಂದು ಅವರು ತಿಳಿಸಿದ್ದಾರೆ.

ಶ್ರದ್ಧಾಂಜಲಿ ವಾಹನಕ್ಕೆ ಒಂದು ವಾಹನ ಚಾಲಕ ಮತ್ತು ಅಗತ್ಯ ಇಂಧನ ಒದಗಿಸಲಾಗುತ್ತದೆ. ಪಾರ್ಥೀವ ಶರೀರದ ಸಾಗಾಣಿಕೆ ಸೇವೆ ಬೇಕಾಗಿರುವ ಕುಟುಂಬದವರು 108 ಆರೋಗ್ಯ ಕವಚಕ್ಕೆ ಕರೆ ಮಾಡಿದಲ್ಲಿ, ಶ್ರದ್ಧಾಂಜಲಿ ವಾಹನವು ಮೃತರು ಇದ್ದಲ್ಲಿಗೆ ಬಂದು, ಮೃತರನ್ನು ಅವರ ಮನೆಗೆ ಅಥವಾ ಅಂತ್ಯಕ್ರಿಯೆ ಜಾಗಕ್ಕೆ ಉಚಿತವಾಗಿ ಸಾಗಾಣಿಕೆ ಮಾಡಿಕೊಡುತ್ತದೆ. ಈ ಕಾರ್ಯಕ್ರಮವನ್ನು ಎಲ್ಲಾ ಜಿಲ್ಲೆಗಳಲ್ಲಿ ಅನುಷ್ಠಾನಗೊಳಿಸಲು ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯ ಆಯುಕ್ತರು ಆದೇಶ ಹೊರಡಿಸಿದ್ದಾರೆ.

ಎಂಆರ್‌ಎಂ:ಜಿಪಿಆರ್.

# ವಿಧಾನಸಭೆ ಅಧಿವೇಶನ

ಬೆಂಗಳೂರು, ಫೆಬ್ರವರಿ 25 , (ಕರ್ನಾಟಕ ವಾರ್ತೆ)

ಕರ್ನಾಟಕ ವಿಧಾನಸಭೆಯ 13ನೇ ಅಧಿವೇಶನದ ಮುಂದುವರೆದ ಉಪವೇಶನವು ಮಾರ್ಚ್ 15 ರಂದು ಬೆಳಿಗ್ಗೆ 11.30 ಗಂಟೆಗೆ ಬೆಂಗಳೂರಿನ ವಿಧಾನಸೌಧದಲ್ಲಿರುವ ವಿಧಾನಸಭೆಯ ಸಭಾಂಗಣದಲ್ಲಿ ಸೇರಲಿದೆ ಎಂದು ವಿಧಾನಸಭೆಯ ಸಚಿವಾಲಯದ ಪ್ರಕಟಣೆ ತಿಳಿಸಿದೆ.

ಎಂಆರ್‌ಎಂ:ಜಿಪಿಆರ್

# "ಜೀವಸಾರ್ಥಕತೆ" : ಅಂಗಾಂಗ ಕಸಿ ಜೋಡಣೆ ಕುರಿತ ವಿನೂತನ ಸೊಸೈಟಿ ಅಸ್ತಿತ್ವಕ್ಕೆ

ಬೆಂಗಳೂರು, ಫೆಬ್ರವರಿ 25 , (ಕರ್ನಾಟಕ ವಾರ್ತೆ)

ಮೆದುಳಿನ ನಿಷ್ಕ್ರಿಯೆಯಿಂದ ಮರಣಹೊಂದಿದ ದೇಹದಿಂದ ಅಂಗಾಂಗಗಳನ್ನು ದಾನಮಾಡುವ ಕುರಿತು ಅಂಗಾಂಗ ಕಸಿ ಜೋಡಣೆ ಮಾಡುವ ಅಧಿನಿಯಮ, 1994 ರಲ್ಲಿ ಉಲ್ಲೇಖಿಸಲಾಗಿದೆ. ಈ ಕಾರ್ಯಕ್ರಮವನ್ನು ಪ್ರಸ್ತುತ ಕರ್ನಾಟಕ ವಲಯ ಸಮನ್ವಯ ಸಮಿತಿ **(ZCCK)** ಕಾರ್ಯನಿರ್ವಹಿಸುತ್ತಿದೆ.

ಈ ನಿಟ್ಟಿನಲ್ಲಿ ಸಮನ್ವಯತೆ ಮತ್ತು ಹೊಂದಾಣಿಕೆ, ಸಾರ್ವಜನಿಕ ಅರಿವು ಇಂತಹ ಕೆಲವು ವಿಚಾರಗಳನ್ನು ಮತ್ತು ಹಾಲಿ ಇರುವ ಕಾರ್ಯಕ್ರಮವನ್ನು ಬಲಪಡಿಸಲು ಸರ್ಕಾರ ನಿರ್ಧಾರ ಕೈಗೊಂಡಿದೆ.

ಸರ್ಕಾರ ಮೇಲ್ಕಂಡ ವಿಷಯಗಳನ್ನು ಪರಿಗಣಿಸಿ ಜೀವಸಾರ್ಥಕತೆ ಎಂಬ ಹೊಸ ಯೋಜನೆಯನ್ನು ಕಲ್ಪಿಸಿ ಕಾರ್ಯರೂಪಕ್ಕೆ ತರಲು ಸನ್ಮಾನ್ಯ ಮುಖ್ಯಮಂತ್ರಿಗಳ 2016-17 ನೇ ಆಯವ್ಯಯ ಭಾಷಣದಲ್ಲಿ ಘೋಷಣೆ ಮಾಡಲಾಗಿದೆ.

ಈ ಯೋಜನೆಯನ್ನು ಅನುಷ್ಠಾನಗೊಳಿಸಲು "ಜೀವಸಾರ್ಥಕತೆ" ಎಂಬ ಸೊಸೈಟಿ ದಿನಾಂಕ: 21-02-2017 ರಂದು ನೋಂದಣಿಯಾಗಿರುತ್ತದೆ. ಈ ಸಂಸ್ಥೆಯು ಹಾಲಿ ಜಡ್.ಸಿ.ಸಿ.ಕೆ. ಸಂಸ್ಥೆಯು ಕಾರ್ಯನಿರ್ವಹಿಸುತ್ತಿರುವ ನಿಮ್ಹಾನ್ಸ್ ಆವರಣದಲ್ಲಿಯೇ

ಮುಂದುವರೆಸಲಾಗುತ್ತದೆ ಎಂದು ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸೇವೆಗಳ ನಿರ್ದೇಶನಾಲಯದ ಪ್ರಕಟಣೆ ತಿಳಿಸಿದೆ.

ಎಂಆರ್‌ಎಂ:ಜಿಪಿಆರ್.

## Cadaveric Organ Transplantation Act in Karnataka

Bangalore, February 25(Karnataka Information):

ZCCK is the body appointed to oversee the implementation of the Transplantation of Human Organs Act of 1994. The Organizations functions were to co-ordinate the cadaveric transplantation activities and also educate the public on organ donation. In order to regulate the removal, storage and transplantation of human organs for therapeutic purpose and to educate the public about organ donation of brain dead.

A society has been registered in the name of "Jeevasarthakathe" on 21-02-2017 by Government of Karnataka. The society continues to function in the ZCCK office at NIHMANS complex.

mrm/km